ಘಟಕ – 5

## ಭಾರತದಲ್ಲಿನ ಮಹಿಳಾ ಸಂಬಂಧಿತ ವಿಷಯಗಳು

## Indian Women's Related Subjects

### ಮಹಿಳಾ ಚಳುವಳಿ ಅಥವಾ ಸ್ತ್ರೀ ವಿಮೋಚನಾ ಚಳುವಳಿ

ಸ್ತ್ರೀವಾದಿ ಚಳುವಳಿ ಎಂಬುದು ಮೂಲತಃ ದೇಶದಲ್ಲಿನ (ಗಂಡು/ಹೆಣ್ಣು) ಮತ್ತು ಪುರುಷರು+ಸ್ತ್ರೀಯರು ಇಬ್ಬರು ಸಮಾನರಾಗುವ ಲಿಂಗ ತಾರತಮ್ಯವಿಲ್ಲದ ಸಮಾಜ ನಿರ್ಮಾಣಕ್ಕಾಗಿ ಪ್ರತಿಪಾದನೆ ಮಾಡಿಕೊಂಡು ಚಳುವಳಿಯಾಗಿದೆ. ಇದರ ಉಗಮ (ಈ ಸ್ತ್ರೀವಾದಿಗಳ) ಚಳುವಳಿಯು 1862ರಲ್ಲಿ ಅಮೇರಿಕಾದ ದಕ್ಷಿಣ ಕೆಲಿಪೋರ್ನಿಯಾದಲ್ಲಿ ಪ್ರಥಮವಾಗಿ ಪ್ರಾರಂಭವಾಯಿತು. ಅಂದಿನ ಆ ಸ್ತ್ರೀವಾದಿಗಳು ಸಮಾಜದಲ್ಲಿ ಗಂಡು– ಹೆಣ್ಣುಗಳು ನಡುವಿನ ತಾರತಮ್ಯವನ್ನು ಹೋಗಲಾಡಿಸಲು ಲಿಂಗ ಸಮಾನತೆಗಾಗಿ, ಸ್ತ್ರೀಯರ ಅಸ್ತಿತ್ವ ಮತ್ತು ಪ್ರಾಮುಖ್ಯತೆಯನ್ನು ಪ್ರತಿಪಾದಿಸಿ, ಸ್ತ್ರೀಯರನ್ನು ಗುರುತಿಸಿಕೊಳ್ಳುವದು ಅವರಿಗೆ ರಕ್ಷಣೆ ಮತ್ತು ಅಭಿವೃದ್ಧಿಗೆ ಅವಕಾಶ ನೀಡಿ (Women's Identity) ಮತ್ತು ಸ್ತ್ರೀಯ ಮೇಲೆ ನಡೆಯುತ್ತಿರುವ ಶೋಷಣೆಯನ್ನು ತೆಡೆಯುವುದಾಗಿತ್ತು.

ದೇಶ ವಿದೇಶಗಳಲ್ಲಿ ವಿಭಿನ್ನ ಸ್ಥರದ ಸ್ತ್ರೀವಾದಿಗಳ ಚಳುವಳಿಯ ಪರಿಣಾಮವಾಗಿ ಇಂದು ಮಹಿಳೆಯರ ಬದುಕಿನಲ್ಲಿ ಸಕಾರಾತ್ಮಕವಾಗಿ ಬದಲಾವಣೆ ಉಂಟಾಗಿ, ಮಹಿಳೆಯರ ಮೇಲೆ ನಡೆಯುತ್ತಿರುವ ಶೋಷಣೆ, ದೌರ್ಜನ್ಯಗಳನ್ನು ತಡೆಯುವಲ್ಲಿ ಮತ್ತು ಪುರುಷ ಪ್ರಧಾನದ ಪರಿಕಲ್ಪನೆ ಕಡಿಮೆ ಮಾಡಿ ಸಮಾಜದಲ್ಲಿನ ಲಿಂಗದ ತಾರತಮ್ಯದ ನೀತಿಯನ್ನು ನಿವಾರಿಸುವಲ್ಲಿ ಯಶಸ್ವಿಯಾಗಿದೆ. ಆದರೆ ಈ ಗುರಿ ಸಾಧನೆಗೆ ಸ್ತ್ರೀವಾದಿಗಳು ಶತಮಾನಗಳ ಹೋರಾಟ, ಚಳುವಳಿಗಳನ್ನು ನಡೆಸಿಕೊಂಡು ಬಧುತ್ತಿದ್ದಾರೆ.

18,19 ಮತ್ತು 20ನೇ ಶತಮಾನಗಳಲ್ಲಿ ದೇಶ–ವಿದೇಶಗಳಲ್ಲಿ ನಡೆದು ಬಂದ ಅನೇಕ ಸ್ತ್ರೀವಾದಿಗಳ ಚಳುವಳಿಗಳು ಮಹಿಳೆಯರಿಗೆ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸಮಾನತೆಗಾಗಿ (to make society for women) ಮತ್ತು ಸ್ತ್ರೀಗೆ ಎಲ್ಲಾ ರಂಗದಲ್ಲಿಯೂ ಸಮಾನ ಅವಕಾಶಗಳನ್ನು ನೀಡಬೇಕೆಂಬುದನ್ನು ಮಹಿಳಾವಾದಿ ಚಳುವಳಿಗಾರರು ಪ್ರಮುಖ ಉದ್ದೇಶವಾಗಿ ಪ್ರತಿಪಾದಿಸಿವೆ.

ಭಾರತದಲ್ಲಿಯೂ ಅನೇಕ ಸ್ತ್ರೀವಾದಿಗಳು ಸ್ತ್ರೀ ಸಂಬಂಧಿತ ಸುಧಾರಣೆಗಳಿಗಾಗಿ ಚಳುವಳಿಗಳನ್ನು ನಡೆಸಿದ್ದಾರೆ. ಅವುಗಳಲ್ಲಿನ ಪ್ರಮುಖ ವಿಷಯಗಳಾವುವೆಂದರೆ ಮಹಿಳೆಯರ ಮೇಲಿನ ದೌರ್ಜನ್ಯ ಶೋಷಣೆ, ಅತ್ಯಾಚಾರ ಖಂಡಿಸುವುದಕ್ಕಾಗಿ, ಹೆರಿಗೆ ಕಾಲದಲ್ಲಿ ಹಕ್ಕುಗಳು ಮತ್ತು ವಿಶ್ರಾಂತಿ, ಸಮಾನ ಕೆಲಸಕ್ಕೆ ಸಮಾನ ವೇತನ, ಸ್ತ್ರೀಯರಿಗೆ ಮತಾಧಿಕಾರ, ಕಾನೂನಿನಲ್ಲಿರುವ ತಾರತಮ್ಯದ ನಿವಾರಣೆ, ಶಿಕ್ಷಣ, ಉದ್ಯೋಗದಲ್ಲಿ ಸ್ತ್ರೀಯರಿಗೆ ಸಮಾನ ಅವಕಾಶ ಮತ್ತು ಸಂಸತ್ತು ಮತ್ತು ರಾಜ್ಯ ಶಾಸನಸಭೆಗಳಲ್ಲಿ ಶೇಕಡಾ 33ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಾತಿ ನೀಡಬೇಕೆನ್ನುವ ದೇಶದ ಸ್ತ್ರೀವಾದಿ ಹೋರಾಟಗಾರರ ಪ್ರಮುಖ ಬೇಡಿಕೆಗಳಾಗಿವೆ.

ಭಾರತದಲ್ಲಿ ಪ್ರಾರಂಭದಲ್ಲಿನ ಸ್ತ್ರೀವಾದಿಗಳ ಚಳುವಳಿಗಳು ದೇಶದಲ್ಲಿನ ಸಾಮಾಜಿಕ ರೂಢಿ ಪದ್ಧತಿ ಹಾಗೂ ಸಂಸ್ಕೃತಿಯ ವಿರುದ್ಧ ಅನೇಕ ಚಳುವಳಿಗಳನ್ನು ನಡೆಸಿವೆ. ಅವುಗಳಲ್ಲಿ ವಿಶೇಷವಾದವು ಗಳೆಂದರೆ– ಪುರುಷ ಪ್ರಧಾನ ಸಮಾಜದಲ್ಲಿನ ನಂಬಿಕೆಗಳ ವಿರುದ್ಧ ಹೋರಾಟಗಳು. ಹೆಣ್ಣು ಎಲ್ಲದಕ್ಕೂ ಹೊಂದಿಕೊಂಡು ಹೋಗಬೇಕು, ಅವಳು ಪುರಷನಿಗೆ ತಗ್ಗಿ ಬಗ್ಗಿ ನಡೆಯಬೇಕು, ಹೆಣ್ಣು ಮಕ್ಕಳಿಗೆ ತನ್ನ ಶಿಕ್ಷಣ, ಉದ್ಯೋಗ, ವಿವಾಹದಂತಹ ವಿಷಯಕ್ಕಾಗಿ ಪುರುಷರ ನಿರ್ಧಾರವನ್ನು ಅವಲಂಬಿಸುವದು. ಮಹಿಳೆಗೆ ಪ್ರಶ್ನಿಸುವ ಹಕ್ಕು, ಅಭಿಪ್ರಾಯದ, ಸ್ವಾತಂತ್ರ್ಯವಿಲ್ಲ. ಶಿಕ್ಷಣ, ಉದ್ಯೋಗ, ವಿವಾಹದಂತಹ ವಿಷಯಕ್ಕಾಗಿ ಪುರುಷರ ನಿರ್ಧಾರವನ್ನು ಅವಲಂಬಿಸುವದು. ಮಹಿಳೆಗೆ ಪ್ರಶ್ನಿಸುವ ಹಕ್ಕು, ಅಭಿಪ್ರಾಯದ, ಸ್ವಾತಂತ್ರ್ಯವಿಲ್ಲ. ಶಿಕ್ಷಣ, ಉದ್ಯೋಗ, ವಿವಾಹದ ನಿರ್ಧರಿಸುವಲ್ಲಿ, ಆಸ್ತಿಯಲ್ಲಿನ ಪಾಲುಗಾರಿಕೆಯಲ್ಲಿ ಹಕ್ಕಿಲ್ಲ, ವಿಧವೆಗೆ ಮರುವಿವಾಹದ ಹಕ್ಕಿಲ್ಲ, ಸತಿ ಪದ್ಧತಿ, ಇತ್ಯಾದಿ ಅನೈಜ್ಞಾನಿಕ ಸಾಮಾಜಿಕ ನಿಬಂಧಗಳ ವಿರುದ್ಧದ ಚಳುವಳಿಗಳಾಗಿದ್ದವು.

ಭಾರತದಲ್ಲನ ಸ್ತ್ರೀವಾದಿಗಳ ಚಳುವಳಿಗಳ ಇತಿಹಾಸವನ್ನು ಪ್ರಮುಖವಾಗಿ ಮೂರು ವಿಭಿನ್ನ ಸ್ಥರದಲ್ಲಿ ವಿಂಗಡಿಸಿ ನಾವು ತಿಳಿದುಕೊಳ್ಳಬಹುದಗಿದೆ.

1. ಪ್ರಥಮ ಹಂತದ ಸ್ತ್ರೀವಾದಿಗಳ ಚಳುವಳಿ ಯು 19ನೇ ಶತಮಾನದಲ್ಲಿ ಭಾರತದ ವಸಾಹತುಗಾರರು ಆಚರಣೆಯಲ್ಲಿ ಸಾಮಾಜಿಕ ಅನಿಷ್ಟ ಪದ್ಧತಿ, ಸತಿ ಪದ್ಧತಯ ವಿರುದ್ಧವಾಗಿ ಶ್ರೀ ರಾಜಾರಾಮ್ ಮೋಹನ್ ರಾಯರ ಪ್ರಯತ್ನದಿಂದಾಗಿ ಭಾರತದಲ್ಲಿನ ಸತಿ ಪದ್ಧತಿ ಕೊನೆಗೊಳ್ಳಲು ಸಾಧ್ಯವಾಯಿತು (During British Rule)

2. ದ್ವಿತೀಯ ಹಂತದ ಸ್ತ್ರೀವಾದಿಗಳ ಚಳುವಳಿಯು 1915 ರಿಂದ 1947ರ ವರೆಗೆ ಮಹಾತ್ಮಾ ಗಾಂಧೀಜಿ ದೇಶದ ಸ್ವಾತಂತ್ರ್ಯದ ಸಂಗ್ರಾಮದಲ್ಲಿ ಪ್ರಥಮ ಬಾರಿಗೆ ಸ್ತ್ರೀಯರನ್ನು ಸೇರಿಸುವುದರ ಮೂಲಕ ಸ್ತ್ರೀವಾದ ದೇಶದಲ್ಲಿ ಬೆಳೆದಿದೆ. ದೇಶದ ಸ್ವಾತಂತ್ರ್ಯಕ್ಕಾಗಿ ಗಾಂಧೀಜಿಯ ಕರೆಯ ಮೇರೆಗೆ ನೂರಾರು ಸ್ವಯಂ ಸೇವಕಿಯರು ಕಾಂಗ್ರೆಸ್‌ನ ಕಾರ್ಯಕರ್ತೆಯರಾಗಿ ಸೇವೆ ಸಲ್ಲಿಸಿದರು. 1925ರಲ್ಲಿ ಶ್ರೀಮತಿ ಸರೋಜಿನಿ ನಾಯ್ಡು ಭಾರತದ ರಾಷ್ಟ್ರೀಯ ಕಾಂಗ್ರೆಸ್‌ಗೆ ಪ್ರಥಮ ಮಹಿಳಾ ಅಧ್ಯಕ್ಷರಾಗಿ ಆಯ್ಕೆಯಾದ ನಂತರ ಭಾರತದ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟದಲ್ಲಿ ದೇಶದ ನೂರಾರು ಮಹಿಳೆಯರು ಸ್ವಯಂ ಪ್ರೇರಿತವಾಗಿ ಪಾಲ್ಗೊಂಡಿರುವದರು ದೇಶದ ಸ್ವಾತಂತ್ರ್ಯದ ಇತಿಹಾಸದ ಪುಟದಲ್ಲಿದೆ.

3. ತೃತೀಯ ಹಾಗೂ ಕೊನೆಯ ಹಂತದ ಸ್ತ್ರೀವಾದಿಗಳ ಚಳುವಳಿಯು ದೇಶದ ಸ್ವಾತಂತ್ರ್ಯದ ನಂತರದಲ್ಲಿ (Post Independence era) ಬೆಳೆದು ಬಂದಿದೆ. ಈ ಹಂತದ ಚಳುವಳಿಯಲ್ಲಿ ಮಹಿಳೆಯರು ತಮ್ಮ ವಿವಾಹದ ನಂತರವು ತಮ್ಮ ಸ್ವಾಭಿಮಾನದ ಸಮಾನ ಹಕ್ಕುಗಳಿಗಾಗಿ, ಕುಟುಂಬದಲ್ಲಿ ಮತ್ತು ಅವರ ಕೆಲಸದ ಸ್ಥಳಗಲ್ಲಿ ಸಮಾನ ಅವಕಾಶ ಮತ್ತು ಸ್ಥಾನಮಾನ ಪಡೆಯುವುದಕ್ಕಾಗಿ ಮಹಿಳೆಯರಿಂದ ಚಳುವಳಿಗಳು ನಡೆದಿವೆ. ಇದಲ್ಲದೆ ಮಹಿಳೆಯರಿಗೆ ಮತದಾನದ ಹಕ್ಕು ಮಹಿಳೆಯರಿಗೆ ಶಿಕ್ಷಣ–ಉದ್ಯೋಗ ನಡೆದಿದೆ. ಇದಲ್ಲದೆ ಮಹಿಳೆಯರಿಗೆ ಮತದಾನದ ಹಕ್ಕು, ಮಹಿಳೆಯರಿಗೆ ಶಿಕ್ಷಣ–ಉದ್ಯೋಗ ಹಾಗೂ ಶಾಸನಸಭೆಗಳಲ್ಲಿ ಮೀಸಲಾತಿಯನ್ನು ವಿಸ್ತರಿಸುವುದಕ್ಕಾಗಿ ವಿವಾಹ ನಂತರದಲ್ಲಿ ಸಮಾನ ಹಕ್ಕುಗಳು, ಗರ್ಭಿಣಿ ಸ್ತ್ರೀ ಹೆರಿಗೆಯ ನಂತರದ ಹಕ್ಕುಗಳು, ಹೆಣ್ಣು ಮಕ್ಕಳನ್ನು ಸ್ತ್ರೀಯನ್ನು ವಿವಿಧ ಸ್ಥರದ

ಲೈಂಗಿಕ ಶೋಷಣೆ, ಮಾರಾಟ ಮತ್ತು ದೌರ್ಜನ್ಯ ಮತ್ತು ಅತ್ಯಾಚಾರದ ವಿರುದ್ಧದ ಚಳುವಳಿಗಳು ಇತ್ಯಾದಿಗಳೂ ಸೇರಿವೆ.

ವಿಶ್ವದಲ್ಲಿನ ಸ್ತ್ರೀವಾದಿಗಳ ವಿಚಾರಗಳ ಪ್ರೇರಣೆಯಿಂದಾಗಿ ಭಾರತದಲ್ಲಿಯೂ ಹೊಸ ಜನಾಂಗ ಸ್ತ್ರೀವಾದವು ಬೆಳೆದಿದೆ. ಭಾರತದಲ್ಲಿನ ಹೊಸ ಸ್ತ್ರೀವಾದಿಗಳ ಪ್ರತಿಪಾದನೆಯ ಫಲಶೃತಿಯಾಗಿ ಭಾರತ ದಲ್ಲಿನ ಮಹಿಳೆಯರ ಸ್ಥಿತಿಗತಿ ಸುಧಾರಣೆಯಾಗಿ ಲಿಂಗ ತಾರತಮ್ಯ ನಿವಾರಣೆಗೆ ಸಹ ಜಾಗೃತಿ ರೂಪಿಸು ವಲ್ಲಿ ಸಹಾಯಕವಾಗಿದೆ. ಉನ್ನತ ಹಂತದ ಶಿಕ್ಷಣ ಹೊಂದಲು, ಉದ್ಯೋಗದಲ್ಲಿ ಮೀಸಲಾತಿ, ವಿವಾಹದ ಆಯ್ಕೆಗೆ ಸ್ವಾತಂತ್ರ್ಯ, ಜನಾಂಗದ ಅಭಿವೃದ್ಧಿಯ ಹಕ್ಕುಗಳು (Reproductive rights) ರಾಜಕೀಯ ಕ್ಷೇತ್ರದಲ್ಲಿ ಮೀಸಲಾತಿ, ವಿವಾಹ ವಿಚ್ಛೇದನಕ್ಕೆ ಕುರಿತಾದ ವಿಶೇಷ ರಕ್ಷಣೆಗಳು ಮಹಿಳೆಯರಿಗೆ ದೊರಕಿದೆ. ಅಲ್ಲದೆ ಮಹಿಳೆಗೆ ಲಿಂಗತ್ವದಲ್ಲಿ ಸಮಾನತೆ ಮತ್ತು ನ್ಯಾಯ ನೀಡಿ (Gender Equity Justice) ಮಹಿಳೆ ತಾನಿಚ್ಛಿಸಿದಂತೆ ಬದುಕಲು ಅವಕಾಶ ನೀಡುವುದು, ಪುರುಷನ ನಿಯಂತ್ರಣದಲ್ಲಿಯೇ (Patriarchy family) ಮಹಿಳೆಯು ಜೀವನ ನಡೆಸಬೇಕೆಂಬ ಕಟ್ಟು ಪಾಡುಗಳಿಂದ ಹೊರಗೆ ಬರಲು ಬಯಸುತ್ತಿದ್ದಾರೆ.

ಭಾರತದ ನಾಗರಿಕತೆ ಪ್ರಾರಂಭವಾದಾಗಿನಿಂದಲೂ ಸಾಂಪ್ರದಾಯಿಕ ಭಾರತೀಯ ಸಮಾಜದಲ್ಲಿ ಲಿಂಗದಲ್ಲಿನ ಸಮಾನತೆ ತಾರತಮ್ಯಗಲು ಹಲವು ಸ್ವರೂಪೂದಲ್ಲಿ ಬೆಳೆದು ಬಂದಿವೆ. ಅಂದಿನಿಂದ ಅವುಗಳನ್ನು ನಿವಾರಿಸುವುದಕ್ಕಾಗಿ ವಿವಿಧ ಕಾಲಘಟ್ಟದಲ್ಲಿ ಭಾರತದಲ್ಲಿನ ಹಲವಾರು ಮಹಿಳಾ ಪರ ಸಂಘಟನೆಗಳು ಅಸ್ತಿತ್ವಗೊಂಡು ತಮ್ಮದೇ ಆದ ರೀತಿಯಲ್ಲಿ ಮಹಿಳೆಯರ ಪರ ವಾದ ಚಳುವಳಿಗಳನ್ನು ಪ್ರತಿಭಟನೆಗಳನ್ನು ಮಾಡುತ್ತಾ ಬಂದಿವೆ. ಅವುಗಳಲ್ಲಿ ಅತ್ಯಂತ ಪುರಾತನ ಮಹಿಳಾ ಪರ ಸಂಘಟನೆ ಎಂದರೆ 1927ರಲ್ಲಿ ಸ್ಥಾಪನೆಯಾದ ಅಖಿಲ ಭಾರತ ಹಿಂದೂ ವಿವಾಹ ಶಾಸನವೊಂದನ್ನು ಜಾರಿಗೆ ತರಲಾಯಿತು. ನಂತರ 1955ರಲ್ಲಿ ವಿವಾಹ ವಿಚ್ಛೇದನದ ಶಾಸನ, 1956ರಲ್ಲಿ ದತ್ತು ಶಾಸನ (Adoption) ವರದಕ್ಷಿಣೆ ಶಾಸನ ಮುಂತಾದವುಗಳನ್ನು ಅಂಗೀಕರಿಸಿ ಜಾರಿಗೆ ತರಲಾಗಿದೆ.

ತದನಂತರ 1954ರಲ್ಲಿ ಭಾರತದ ರಾಷ್ಟ್ರೀಯ ಮಹಿಳಾ ಒಕ್ಕೂಟ (NFOW- National Federation for Women) ಮತ್ತು ಅಖಿಲ ಭಾರತದ ಮಹಿಳಾ ಸಂಘಟನೆ–1981 (AIWO-All India Women's Organisation) ಎಂಬ ಎರಡು ಪ್ರತ್ಯೇಕ ಮಹಿಳಾ ಪರ ಸಂಘಟನೆಗಳು ಅಸ್ತಿತ್ವಕ್ಕೆ ಬಂದವು. ಇದಲ್ಲದೆ ಸ್ವಯಂ ಉದ್ಯೋಗ ನಿರತ ಮಹಿಳಾ ಸಂಘಟನೆಗಳು (Working Womne's Forum) ಕೂಡಾ ದೇಶದಲ್ಲಿ ಕಾರ್ಯನಿರತವಾಗಿದೆ.

ಉತ್ತರಾಖಂಡದ ಎಂಬ ಪ್ರತ್ಯೇಕ ರಾಜ್ಯದ ಬೇಡಿಕೆಯ ಸಂದರ್ಭದಲ್ಲಿ ಉತ್ತರಾಖಂಡ ರಾಜ್ಯದ ಮಹಿಳಾ ಘಟಕದ ವತಿಯಿಂದ ಆಯೋಜಿಸಿದ ಚಳುವಳಿಯಲ್ಲಿ ಭಾಗವಹಿಸಿದ ರಾಜ್ಯದ ಮಹಿಳೆಯರೆಲ್ಲರೂ ಪೊಲೀಸರಿಂದ ಲಾಟಿ ಏಟನ್ನು ಅನುಭವಿಸುವುದರ ಮೂಲಕ ತಮ್ಮ ಚಳುವಳಿಯಲ್ಲಿ ತೊಡಗಿಸಿಕೊಂಡಿದ್ದರು.

ಅದರಂತೆ ಆಂಧ್ರ ಪ್ರದೇಶದ ರಾಜ್ಯವೊಂದರಲ್ಲಿನ ಮಹಿಳಾ ಸಂಘಟನೆಯ ವತಿಯಿಂದ ಆಯೋಜಿಸಲಾದ ಮಧ್ಯಪಾನದ ವಿರುದ್ಧದ ನಡೆಸಿದ್ದ ಮಹಿಳೆಯರ ಚಳುವಳಿಯ ಪರಿಣಾಮವಾಗಿ

1986ರಲ್ಲಿನ ಆಂಧ್ರದ ಮುಖ್ಯಮಂತ್ರಿ ಎನ್.ಟಿ. ರಾಮ್‌ರಾವ್‌ರವರ ನೇತೃತ್ವದಲ್ಲಿನ ಸರಕಾರವು ರಾಜ್ಯದಲ್ಲಿ ಮಧ್ಯಪಾನ ನಿಷೇಧದ ಕಾನೂನು ಜಾರಿಗೆ ತಂದು ಮಧ್ಯದ ಮಾರಾಟವನ್ನು ರಾಜ್ಯದಲ್ಲಿ ನಿಲ್ಲಿಸಲಾಯಿತು.

ಸಮಾರೋಪ

ನಮ್ಮ ದೇಶದಲ್ಲಿ ಸ್ತ್ರೀವಾದದ ಚಳುವಳಿಗಳ ಪರಿಣಾಮವಾಗಿ ನಗರ ಪ್ರದೇಶದ ಮಹಿಳೆಯರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಶೈಕ್ಷಣಿಕ ಸ್ಥಿತಿಗತಿಯಲ್ಲಿ ಸುಧಾರಣೆಗಳಾಗಿದ್ದರೂ ಕೂಡಾ, ನಮ್ಮ ದೇಶದಲ್ಲಿ ಗ್ರಾಮೀಣ ಭಾಗದಲ್ಲಿ ಜೀವಿಸುತ್ತಿರುವ ಮಹಿಳೆಯರು ತಮ್ಮ ಹಕ್ಕುಗಳ ಬಗ್ಗೆ ಸರಿಯಾದ ತಿಳುವಳಿಕೆಗಳನ್ನು ಹೊಂದಿಲ್ಲವಾದ್ದರಿಂದ ನಮ್ಮ ದೇಶದ ಪುರುಷ ಪ್ರಧಾನದ ಸಮಾಜದ ವ್ಯವಸ್ಥೆಯಲ್ಲಿ ಜೀವಿಸುತ್ತಿರುವ ಮಹಿಳೆಯ ಹಲವು ಪ್ರಕಾರದ ಅಸಮಾನತೆ ಹಾಗೂ ಹಲವು ನೋವು ಸಂಕಷ್ಟಗಳನ್ನು ಸಹಿಸಿಕೊಂಡು ಜೀವನವನ್ನು ಸಾಗಿಸುತ್ತಿದ್ದಾರೆ. ಭಾರತದಲ್ಲಿನ ಗ್ರಾಮೀಣ ಮಹಿಳೆಯು ತಮ್ಮಲಿರುವ ವೈಯಕ್ತಿಕ (ಬಲ) ಸಾಮರ್ಥ್ಯ ಬಗ್ಗೆ, ಹಕ್ಕುಗಳ ಬಗ್ಗೆ, ತಿಳುವಳಿಕೆಯು ಇನ್ನೂ ಹೊಂದಬೇಕಾಗಿದೆ. ಭಾತರದಲ್ಲಿನ ಸ್ತ್ರೀವಾದಿ ಚಳುವಳಿಗಾರರು ತಮ್ಮ ವಿಭಿನ್ನ ವ್ಯಾಪಕ ಸ್ವರೂಪದ ಚಳುವಳಿಯ ಮೂಲಕ ದೇಶದಲ್ಲಿನ ಮಹಿಳೆಯರ ಸಮಗ್ರ ಅಭಿವೃದ್ಧಿಯ ಹಾಗೂ ಕಲ್ಯಾಣ ಮತ್ತು ಅವರ ಹಿತರಕ್ಷಣೆಗಾಗಿ ಕೇಂದ್ರ ರಾಜ್ಯ ಸರಕಾರವು ಅನೇಕ ಕಾನೂನು ನೀತಿ ಧೋರಣೆಗಳನ್ನು ರೂಪಿಸಿಕೊಂಡು ಜಾರಿಗೆ ತಂದಿವೆ.

ಸ್ತ್ರೀವಾದಿಗಳ ಸ್ವಾತಂತ್ರ್ಯ ಪೂರ್ವದ ಚಳುವಳಿಗಳು ದೇಶದ ಸ್ವಾತಂತ್ರ್ಯದ ಪೂರ್ಣ ಪುರುಷ ಪ್ರಧಾನದ ವ್ಯವಸ್ಥೆಯನ್ನು ವಿರೋಧಿಸಿ ಚಳುವಳಿ ನಡೆಸಿದ್ದರೆ, ಸ್ವಾತಂತ್ರ್ಯದ ನಂತರದಲ್ಲಿ ಸ್ತ್ರೀವಾದಿಗಳು, ಸಮಾಜದಲ್ಲಿ ಮಹಿಳೆಯರಿಗೆ ಸಮಾನ ಸ್ವಾತಂತ್ರ್ಯ ವರದಕ್ಷಿಣೆಯ ವಿರುದ್ಧದ ಹೋರಾಟಗಳು, ಲೈಂಗಿಕ ಶೋಷಣೆ, ಅತ್ಯಾಚಾರ, ಭ್ರೂಣ ಹತ್ಯೆ, ಮಹಿಳೆಯ ಆರೋಗ್ಯದ ರಕ್ಷಣೆಗೆ ಸಂಬಂದಿಸಿದ ಹೋರಾಟಗಳು ರಾಜಕೀಯದಲ್ಲಿ ಸೂಕ್ತ ಪ್ರಾತಿನಿಧ್ಯ ಇತ್ಯಾದಿಗಳು ಮಹಿಳಾ ಚಳುವಳಿಯ ಪ್ರಮುಖ ವಿಷಯಗಳಾಗಿವೆ. ಭಾರತದಲ್ಲಿನ ಸ್ತ್ರೀವಾದಿಗಳ ಚಳುವಳಿಗಳ ಕುರಿತಾಗಿ ಒಂದು ಪ್ರಮುಖ ಟೀಕೆ ಏನೆಂದರೆ ಸ್ತ್ರೀವಾದಿಗಳು ನಗರ ಪ್ರದೇಶದ ಮಹಿಳೆಯರ ಜೀವನದಲ್ಲಿ ಈಗಾಗಲೇ ಹಲವು ಪಟ್ಟು ಉತ್ತಮ ಪರಿಸ್ಥಿತಿ ಬೆಳವಣಿಗೆಯನ್ನು ಮತ್ತಷ್ಟು ಸೌಲಭ್ಯಕ್ಕಾಗಿ ಹೋರಾಡುತ್ತಿರುವವರು ಬಡ ಮತ್ತು ಕೆಳಜಾತಿ ವರ್ಗದ ಹಾಗೂ ಗ್ರಾಮೀಣ ಮಹಿಳೆಯರ ಸ್ಥಾನಮಾನ ಸುಧಾರಣೆಗಾಗಿ ಸ್ತ್ರೀವಾದಿಗಳೂ ಕಿಂಚತ್ತು ಹೋರಾಟ ಮಾಡದಿರುವುದು ಈ ದೇಶದ ಸ್ತ್ರೀವಾದಿಗಳ ಚಳುವಳಿಯ ಒಂದು ಪ್ರಮುಖ ವೈಫಲ್ಯವೆಂದು ಹೇಳಲಾಗುತ್ತಿದೆ ಹಾಗೂ ನಮ್ಮ ದೇಶದಲ್ಲಿ ಲಿಂಗಾಧಾರಿತ ಪೂರ್ವ ಗ್ರಹಪೀಡಿತ ಪರಿಕಲ್ಪನೆಗಳು ನಮ್ಮ ಭಾರತೀಯ ಪುರುಷ ಪ್ರಧಾನದ ಸಮಾಜದ ವ್ಯವಸ್ಥೆಯಿಂದ ಸಂಪೂರ್ಣವಾಗಿ ಕೊನೆಯಾಗದ ಹೊರತು ಸಮಾಜದಲ್ಲಿ ಮಹಿಳೆಯರಿಗೆ ಸಿಗಬೇಕಾದ ಸಮಾನ ಸ್ಥಾನಮಾನ, ಹಕ್ಕುಗಳು, ಸ್ವಾತಂತ್ರ್ಯಗಳು, ನ್ಯಾಯಗಳು ಸಂಪೂರ್ಣವಾಗಿ ದೊರೆಯುವುದಿಲ್ಲ. ಸ್ತ್ರೀವಾದಿಗಳ ಚಳುವಳಿಗಾರರಿಗೆ ಬೆಂಬಲ ಸಹಕಾರ ನೀಡುವುದು ದೇಶದ ಪ್ರತಿಯೊಬ್ಬ ಪುರುಷನ ಕರ್ತವ್ಯವಾದಾಗ ಬಹುಶಃ ಇದು ಸಾಧ್ಯವಾಗಬಹುದು.

ಅಲ್ಲದೇ ಈ ಕಾಲದಲ್ಲಿ ಹಲವಾರು ಬೇಗುದಿಗಳ ಬೆಂಕಿಯಲ್ಲಿ ಬೇಯುತ್ತಿರುವ (ಕಷ್ಟಗಳನ್ನು ಶೋಷಣೆಗಳನ್ನು ಅನುಭವಿಸುತ್ತಿರುವ) ಮಹಿಳೆಯರ ಅಂತರಾಳದ ನೋವಿನಿಂದ ಬಿಡುಗಡೆಗೊಳಿಸಿ, ಅವಳು ಮುಕ್ತ ರೀತಿಯಲ್ಲಿ ಸ್ವತಂತ್ರವಾದ ಬದುಕನ್ನು ಕಟ್ಟಿಕೊಳ್ಳಲು ಅವಳಿಗೆ ನೆರವಾಗುವ ವಾತಾವರಣವನ್ನು ಕಲ್ಪಿಸಿ, ಅವಳ ಸುಖದ ಬದುಕಿನಲ್ಲಿ ನಾವೆಲ್ಲರೂ ಒಂದಾದಾಗ ಮಾತ್ರ ಈ ದೇಶದ

ಸ್ತ್ರೀವಾದಿಗಳ ಹೋರಾಟದ ಉದ್ದೇಶಗಳು ಬಹುಪಾಲು ಪೂರ್ಣಗೊಳ್ಳಲು ಸಾಧ್ಯವಾಗಬಹುದೆಂದು ಆಶಿಸೋಣ.

**ಮಹಿಳಾ ಮೀಸಲಾತಿ (ರಾಜಕೀಯ)**

ಪುರುಷ ಪ್ರಧಾನದ ಭಾರತದ ಸಮಾಜದ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಎಲ್ಲಾ ರಂಗದಲ್ಲಿ (ಶಿಕ್ಷಣ, ಉದ್ಯೋಗ, ರಾಜಕೀಯ, ಸಾಮಾಜಿಕ, ಆರ್ಥಿಕ), ಮೀಸಲಾತಿ ಅಗತ್ಯವಿದೆ ಎಂದು ಸ್ವಾತಂತ್ರ್ಯದ ನಂತರ ದಶಕಗಳಿಂದಲೂ ಸ್ತ್ರೀವಾದಿ ಸಂಘಟನೆಗಳು ಬಲವಾಗಿ ಪ್ರತಿಪಾದಿಸುತ್ತ ಬಂದಿವೆ. ಭಾರತದ ಸಂವಿಧಾನದಲ್ಲಿ ಲಿಂಗ ತಾರತಮ್ಯವನ್ನು ನಿವಾರಿಸಲು ಸ್ತ್ರೀ ಪುರುಷರಿಗೆ ಕಾನೂನಾತ್ಮಕ ಹಕ್ಕುಗಳು ಮತ್ತು ಸಮಾನ ಅವಕಾಶಗಳನ್ನು ನೀಡಲಾಗಿದ್ದರೂ, ಅವುಗಳನ್ನು ಅವರು ಹೊಂದಲು ಮಹಿಳೆಯರಿಗೆ ಸಾಧ್ಯವಾಗದೆ ಇರುವ ಕಾರಣಕ್ಕಾಗಿ ಮಹಿಳೆಯರಿಗಾಗಿ ಇರುವ ಹಕ್ಕುಗಳನ್ನು ಸ್ವಾತಂತ್ರ್ಯವನ್ನು ಪಡೆಯುವದಕ್ಕಾಗಿ ಮಹಿಳಾ ಮೀಸಲಾತಿಯನ್ನು ಜಾರಿಯಾಗಬೇಕೆಂದು ಧ್ವನಿಯನ್ನು ಮೀಸಲಾತಿಯನ್ನು ಸ್ವತಂತ್ರ ಭಾರತದಲ್ಲಿ ಬಲವಾಗಿ ಪ್ರತಿಪಾದಿಸುತ್ತಾ ಬರಲಾಗಿದೆ.

ಮಹಿಳಾ ಮೀಸಲಾತಿ ಜಾರಿಗೆ ತರುವುದರಿಂದ, ಭಾರತದ ಸಂವಿಧಾನದ ಪೂರ್ವ ಪೀಠಿಕೆಯಲ್ಲಿ ಘೋಷ ವಾಕ್ಯಗಳಾದ ಸ್ವಾತಂತ್ರ್ಯ ಸಮಾನತೆ, ನ್ಯಾಯ, ಭಾತೃತ್ವ ಮುಂತಾದವುಗಳನ್ನು ಸಾಕಾರಗೊಳಿಸಲು ಸಾಧ್ಯವಾಗುತ್ತದೆ. ಆ ಮೂಲಕ ಭಾರತೀಯ ಸಮಾಜದಲ್ಲಿ ಲಿಂಗದ ಹೆಸರಿನಲ್ಲಿ ನಡೆಯುತ್ತಿರುವ ಶೋಷಣೆಗಳು, ತಾರತಮ್ಯಗಳು, ಹಿಂಸೆಗಳೂ ನಿವಾರಿಸಿ ಮಹಿಳೆಯರ ವ್ಯಕ್ತಿತ್ವದ ವಿಕಾಸಕ್ಕಾಗಿ ಮಹಿಳಾ ಮೀಸಲಾತಿ ಅಗತ್ಯವಿದೆ ಎಂಬ ಕೂಗು ಇತ್ತೀಚಿನ ದಶಕಗಳಲ್ಲಿ ತೀರ್ವವಾಗುತ್ತಾ ಬೆಳೆದಿದೆ.

ಇದರ ಫಲಶೃತಿ ಎಂಬಂತೆ ನಮ್ಮ ದೇಶದ ಗ್ರಾಮೀಣ ಪ್ರದೇಶಕ್ಕೆ ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳಲ್ಲಿ ಕರ್ನಾಟಕ ಪಂಚಾಯರ್ ರಾಜ್ ಸಂಸ್ಥೆಗಳಲ್ಲಿ ಶೇಕಡಾ 33% ರಷ್ಟು ಮಹಿಳೆಯರಿಗೆ ಮೀಸಲಾತಿಯನ್ನು ಜಾರಿಗೊಳಿಸಿದೆ. ಇದನ್ನು ಸಂವಿಧಾನದ 73ನೇ ತಿದ್ದುಪಡಿಯ ಶಾಸನ 1992 ರಡಿಯಲ್ಲಿ ಮಹಿಳೆಯರಿಗೆ ರಾಜಕೀಯವಾಗಿ ಮೀಸಲಾತಿಯನ್ನು ಜಾರಿಗೊಳಿಸಿರುವದು ಮಹಿಳಾ ಮೀಸಲಾತಿಯ ಪರ ಹೋರಾಟಗಾರರಿಗೆ ಸಿಕ್ಕ ವಿಜಯವಾಗಿದೆ. ಆದಾಗ್ಯೂ ಈ ಮಹಿಳಾ ಮೀಸಲಾತಿಯು ಮಹಿಳೆಯರ ಅಭಿಪ್ರಾಯ, ಹಿತಾಸಕ್ತಿಗಳನ್ನು ರಕ್ಷಿಸುವಲ್ಲಿ ಉಪಯುಕ್ತವಾದ ಅಸ್ತ್ರವನ್ನಾಗಿ ಬಳಸಲಾಗುತ್ತಿಲ್ಲ ಎಂಬುದು ಸಮೀಕ್ಷಕರ ಅಭಿಪ್ರಾಯವಾಗಿದೆ.

ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಮಹಿಳೆಯರಿಗೆ 33% ರಷ್ಟು ರಾಜಕೀಯ ಮೀಸಲಾತಿ ನೀಡಿರುವಂತೆ ದೇಶದ ಸಂಸತ್ತಿನಲ್ಲಿ ಮತ್ತು ರಾಜ್ಯ ಶಾಸನಸಭೆಗಳಲ್ಲಿಯು ಮಹಿಳಾ ಮೀಸಲಾತಿಯ ನೀತಿ ಕಾನೂನಾತ್ಮಕವಾಗಿ ಅಂಗೀಕಾರಗೊಂಡು ಜಾರಿಯಾಗಬೇಕೆಂದು ಅನೇಕ ದಶಕಗಳಿಂದ ಸ್ತ್ರೀವಾದಿ ಸಂಘಟನೆಗಳು ಅನೇಕ ಸರಕಾರೇತರ ಸಂಘಟನೆಗಳು ಬಲವಾಗಿ ಆಳುವ ಪಕ್ಷವನ್ನು ಒತ್ತಾಯಿಸುತ್ತಲೇ ಬಂದಿವೆ.

ದೇಶದಲ್ಲಿ ಈ ಮಹಿಳಾ ಮೀಸಲಾತಿಯ ಕುರಿತಾದ ಕರಡು ಪ್ರತಿಯನ್ನು ಸಿದ್ಧಗೊಳಿಸಿ ಸಂಸತ್ತಿನಲ್ಲಿ (ಮಹಿಳಾ ಮೀಸಲಾತಿ ಜಾರಿಗಾಗಿ ಕಾನೂನು ರಚಿಸುವಂತೆ) ಮಂಡಿಸಲಾಗಿದೆ. ದೇಶದಲ್ಲಿನ ಕೆಲವು ಪಕ್ಷಗಳು 33% ರಷ್ಟು ಸ್ಥಾನಗಳನ್ನು ಸಂಸತ್ತಿನಲ್ಲಿ/ ರಾಜ್ಯ ಶಾಸಕಾಂಗದಲ್ಲಿ ಮಹಿಳಾ ಮೀಸಲಾತಿಯ

ಪರವಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರೆ ಇನ್ನೂ ಕೆಲವು ಪಕ್ಷಗಳು 33% ರಷ್ಟು ಮಹಿಳಾ ಮೀಸಲಾತಿಯನ್ನು ಸಮಾಜದ ಇತರ ಹಿಂದುಳಿದ ವರ್ಗದವರಿಗೆ, ಎಸ್.ಸಿ ಮತ್ತು ಎಸ್.ಟಿ ಮತ್ತು ಓ.ಬಿ.ಸಿ ವರ್ಗದವರನ್ನು ಪರಿಗಣಿಸಿ ಮಹಿಳಾ ಮೀಸಲಾತಿ ಕಾನೂನು ರಚನೆಯಾಗಬೇಕೆಂದು ಒತ್ತಾಯಿಸುತ್ತಿರುವ ಕಾರಣಕ್ಕಾಗಿ ಸಂಸತಿನಲ್ಲಿನ ಮಹಿಳಾ ಮೀಸಲಾತಿ ಕುರಿತಾದ ಕರಡು ಶಾಸನಕ್ಕೆ ವಿಭಿನ್ನ ಪಕ್ಷಗಳ ಒಮ್ಮತದ ಅಭಿಪ್ರಾಯದ ಕೊರತೆಯಿಂದಾಗಿ ಅದನ್ನು ವಿಷಯದ ಕುರಿತಾಗಿ ಶಾಸನವೊಂದಕ್ಕಾಗಿ ಎಲ್ಲಾ ರಾಜಕೀಯ ಪಕ್ಷಗಳು ಬಹಿರಂಗದ ಬೆಂಬಲ ನೀಡುತ್ತಿದ್ದರೂ, ಅದನ್ನು ಆಂತರಿಕವಾಗಿ ಒಪ್ಪಿಕೊಳ್ಳಲು ಮನಸ್ಥಿತಿ ಅವುಗಳಿಗಿಲ್ಲ. ಏಕೆಂದರೆ ಒಂದು ವೇಳೆ 33% ರಷ್ಟು ಮಹಿಳೆಯರಿಗೆ ಸ್ಥಾನಗಳನ್ನು ಮೀಸಲರಿಸಿದರೆ, ಕೇಂದ್ರ ಸಂಸತ್ತಿನಲ್ಲಿ ಕನಿಷ್ಠ 150–160 ಸ್ಥಾನಗಳು ಮಹಿಳೆಯರು ಪಡೆದುಕೊಳ್ಳುತ್ತಾರೆ. ಇಷ್ಟು ಪ್ರಮಾಣದ ಸ್ಥಾನಗಳನ್ನು ಮಹಿಳೆಯರಿಗಾಗಿ ಬಿಟ್ಟುಕೊಡುವ ಮನಸ್ಥಿತಿಯೂ ಯಾವ ರಾಜಕೀಯ ಪಕ್ಷಕ್ಕಿಲ್ಲದಿರುವದು, ಈ ದೇಶದ ಮಹಿಳಾ ಮೀಸಲಾತಿಯ ಮಸೂದೆಯ ಅಂಗೀಕಾರದಲ್ಲಿನ ಒಂದು ಬಹು ದೊಡ್ಡ ತೊಡಕಾಗಿದೆ.

**ಮಹಾನಗರ ಪಾಲಿಕೆಯ ಸಂಯೋಜನೆ :**

ಮಹಾನಗರ ಪಾಲಿಕೆಯು ನಗರ ಪ್ರದೇಶಗಳ ಸ್ಥಳೀಯ ಸರಕಾಗಳಲ್ಲಿಯೇ ಅತ್ಯಂತ ಪ್ರಮುಖವಾದುದು. ಇದು ಹೊಂದಿರುವ ಸದಸ್ಯರಿಗೆ ಹೆಚ್ಚಿನ ಅಧಿಕಾರವಿರುತ್ತದೆ.

ಅ) ಮಹಾನಗರ ಪಾಲಿಕೆಯು ಚುನಾಯಿತ ಪ್ರತಿನಿಧಿಗಳನ್ನು ಹೊಂದಿರುತ್ತದೆ. ಒಂದು ಮಹಾನಗರ ಪಾಲಿಕೆ ಸದಸ್ಯರ ಸಂಖ್ಯೆ 30ಕ್ಕಿಂತ ಕಡಿಮೆ ಅಥವಾ 100ಕ್ಕಿಂತ ಹೆಚ್ಚಾಗಿರಬಾರದು. ಈ ಸದಸ್ಯರನ್ನು ನಗರಗಳಲ್ಲಿ ಜನಸಂಖ್ಯೆಯ ಆಧಾರದ ಮೇಲೆ ವಾರ್ಡಗಳನ್ನಾಗಿ ವಿಂಗಡಿಸಿ ಪ್ರತಿಯೊಂದು ವಾರ್ಡನಿಂದ ನೇರ ಚುನಾವಣೆಯ ಮೂಲಕ ಸದಸ್ಯರನ್ನು ಆಯ್ಕೆಮಾಡಲಾಗುತ್ತದೆ. ಒಂದು ವಾರ್ಡಿನಿಂದ ಎಷ್ಟು ಜನ ಸದಸ್ಯರನ್ನು ಆಯ್ಕೆ ಮಾಡಬೇಕೆಂದು ರಾಜ್ಯ ಸರ್ಕಾರವೇ ನಿರ್ಧರಿಸುತ್ತದೆ. ಇದು ಜನಸಂಖ್ಯೆಯನ್ನು ಆಧರಿಸಿದೆ.

... ಹಾಗೂ ಆರ್ಥಿಕ ಜೀವನವನ್ನು ಸುಧಾರಿಸುವಲ್ಲಿ ನೆರವಾಗಿದೆ.

## ಮಹಿಳಾ ಮೀಸಲಾತಿ
## (RESERVATION FOR WOMEN)



ಸಾವಿರಾರು ವರ್ಷಗಳಿಂದ ಮಹಿಳೆಯನ್ನು ನಾನಾ ರೀತಿಯ ಶೋಷಣೆಗೆ ಒಳಪಡಿಸಿ ಅವರ ಜೀವನವನ್ನು ಸಂಪೂರ್ಣವಾಗಿ ಜೀವಿಸದಂತೆ ಮಾಡಿ ಈ ಸಮಾಜ ಅವರ ನಂಬಿಕೆ ಮತ್ತು ಆತ್ಮವಿಶ್ವಾಸಕ್ಕೆ ಧಕ್ಕೆಯನ್ನುಂಟು ಮಾಡಿದೆ. ಅದನ್ನು ಸರಿ ಪಡಿಸುವ ನಿಟ್ಟಿನಲ್ಲಿ ಮಹಿಳೆಯರಿಗೆ ಆರಕ್ಷಣೆಯನ್ನು ನೀಡಲಾಗಿದೆ. ವಿಶ್ವದ ಸಂಪತ್ತಿನ ಪ್ರಮಾಣದಲ್ಲಿ ಮಹಿಳೆಯರು 1/100 ಭಾಗ ಮಾತ್ರ ಪಾಲುಹೊಂದಿದ್ದಾರೆ ಎಂದರೆ ವಿಪರ್ಯಾಸವೇ ಸರಿ.

### ಶಿಕ್ಷಣ (Education):

ಜ್ಞಾನ ಮತ್ತು ಸ್ವತಂತ್ರ ಜೀವನಕ್ಕೆ ಶಿಕ್ಷಣ ಅತ್ಯಗತ್ಯ. ಇದನ್ನು ಗುರುತಿಸಿದ ಭಾರತ ಸಂವಿಧಾನ ಮಹಿಳಾ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿದೆ. ಏಕೆಂದರೆ,ಅಕ್ಷರಸ್ಥ ಹೆಣ್ಣು ಒಂದು ಅಕ್ಷರಸ್ಥ ಕುಟುಂಬವನ್ನು ನಿರ್ಮಿಸುತ್ತಾರೆ. ಸಾಮಾನ್ಯವಾಗಿ, ಹೆಣ್ಣು ಮಗುವಿನ ಮತ್ತು ಗಂಡು ಮಗುವಿನ ನಡುವೆ ಯಾರಾದರೂ ಒಬ್ಬರನ್ನು ಒದಿಸಬೇಕಾದಾಗ ಹೆಣ್ಣುಮಗು ಮನೆಯಲ್ಲಿ

ಉಳಿಯಬೇಕಾಗುತ್ತದೆ. ಈ ರೀತಿ ಶಿಕ್ಷಣವಿಲ್ಲದೆ ಅಜ್ಞಾನಿಗಳಾಗುತ್ತಾರೆ. ಇದನ್ನು ತಪ್ಪಿಸುವ ಸಲುವಾಗಿ ಸರ್ಕಾರಗಳು ವಿನೂತನ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದು ಬಾಲಕಿಯರು ಶಾಲೆಗೆ ಬಂದು ಶಿಕ್ಷಣ ಪೂರೈಸುವಂತೆ ಮಾಡುತ್ತಿದ್ದಾರೆ. ಬಾಲಕಿಯರನ್ನು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಶಾಲಾ ಕಾಲೇಜುಗಳಿಗೆ ಬರುವಂತೆ ಮಾಡಲುಸರ್ಕಾರಿ ಶಾಲೆಯಲ್ಲಿ ಓದುವ ವಿದ್ಯಾರ್ಥಿಗಳಿಗೆಶುಲ್ಕರಹಿತ ಶಿಕ್ಷಣವನ್ನು ನೀಡಲಾಗುತ್ತಿದೆ.

### ಉದ್ಯೋಗ (Employment):

ಶಿಕ್ಷಣದ ನಂತರದ ಅತಿ ಪ್ರಮುಖ ಘಟ್ಟವೆಂದರೆ ಉದ್ಯೋಗ. ಹೆಣ್ಣು ಕೇವಲ ಅಕ್ಷರಸ್ಥರಾದರೆ ಸಾಲದು ತಮ್ಮ ಕಾಲ ಮೇಲೆ ನಿಂತು ತಮ್ಮನ್ನು ಪೋಷಿಸಿಕೊಳ್ಳುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಮಹಿಳೆಯರಿಗೆ ಭಾರತ ಸಂವಿಧಾನವು ಸರ್ಕಾರಿ ಹುದ್ದೆಗಳಲ್ಲಿ 33% ಮೀಸಲಾತಿಯನ್ನು ಒದಗಿಸಲಾಗಿದೆ. ಈ ವ್ಯವಸ್ಥೆಯನ್ನು ಸಾಮಾಜಿಕ ನ್ಯಾಯ ಮತ್ತು ಸಮಾನತೆಯನ್ನು ಒದಗಿಸುವ ದೃಷ್ಟಿಯಿಂದ ಮಾಡಲಾಗಿದೆ. 1998ರಲ್ಲಿ ಇಂಡಿಯಾ ಟುಡೇ ನಿಯತ ಕಾಲಿಕದಲ್ಲಿ ನಡೆಸಿದ ಸಮೀಕ್ಷೆ ಪ್ರಕಾರ ಬಹುಪಾಲು ತಂದೆ ತಾಯಿಗಳು ಮಗನಿಗಿಂತ ಮಗಳ ಬಳಿಯೇ ತಮ್ಮ ಕೊನೆಯ ದಿನಗಳನ್ನು ಕಳೆಯುವ ಇಚ್ಛೆ ವ್ಯಕ್ತ ಪಡಿಸಿದ್ದರು. ಈ ಸಂಬಂಧದಲ್ಲಿ ವರಕವಿ ರವೀಂದ್ರನಾಥ್ ಟಾಗೋರ್‌ರವರ ಮಾತನ್ನು ಸ್ಮರಿಸುವುದು ಸಮಂಜಸವೆನಿಸುತ್ತದೆ. "ಮಗ ಹೆಂಡತಿ ಬರುವವರೆಗೆ ಮಗನಾಗಿರುತ್ತಾನೆ. ಆದರೆ, ಮಗಳು ಅವನ ಜೀವನದುದ್ದಕ್ಕೂ ಮಗಳಾಗಿರುತ್ತಾಳೆ" ಎಂದಿದ್ದಾರೆ. ಮೀಸಲಾತಿಯು ಮಹಿಳೆಯರಿಗೆ ಆತ್ಮಗೌರವವನ್ನೇ ಅಲ್ಲದೆ ತಮ್ಮ ಜೊತೆಗೆ ತಮ್ಮವರನ್ನೂ ಸಾಕುವ ನಂಬಿಕೆ ವಿಶ್ವಾಸ ಮೂಡಿಸಿದೆ. 30 ವರ್ಷಗಳ ಹಿಂದೆ ಇಂತಹ ಪರಿಸ್ಥಿತಿ ಇರಲಿಲ್ಲ.

ಕೆಲವೇ ವರ್ಷಗಳ ಹಿಂದೆ ಮಹಿಳಾ ಪೈಲಟ್, ಮಹಿಳಾ ಡ್ರೈವರ್, ಮಹಿಳಾ ಕಂಡಕ್ಟರ್ ಎಂದರೆ ಜನ ನಗುವಂತಿತ್ತು. ಆದರೆ ಈ ದಿನ ಮಹಿಳೆಯರು ಎಲ್ಲರಷ್ಟೇ ಸಮರ್ಥವಾಗಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದಾರೆ. ಈ ಆತ್ಮವಿಶ್ವಾಸಕ್ಕೆ ಮಹಿಳಾ ಮೀಸಲಾತಿ ನೀತಿಯೇ ಕಾರಣ.

### ಪ್ರಜಾಪ್ರತಿನಿಧಿ ಸಭೆಗಳು (Representative Bodies):

ಭಾರತ ಸಂವಿಧಾನವು ಮಹಿಳೆಯರು ರಾಜಕೀಯ ಹಾಗೂ ಸಾರ್ವಜನಿಕ ಸೇವಾ ರಂಗದಲ್ಲೂ ತಮ್ಮ ಕಾರ್ಯ ದಕ್ಷತೆಯನ್ನು ಪ್ರದರ್ಶಿಸುವ ಸಲುವಾಗಿ ಪ್ರತಿನಿಧಿ ಸಭೆಗಳಲ್ಲಿ ಆರಕ್ಷಣೆ ನೀಡಲಾಗಿದೆ.

ಪಂಚಾಯಿತಿ ರಾಜ್ ವ್ಯವಸ್ಥೆಯಡಿಯಲ್ಲಿ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ ಪುರಸಭೆ ಮತ್ತು ಪಟ್ಟಣ ಪುರಸಭೆಗಳಲ್ಲಿ ಮಹಿಳೆಯರಿಗೆ ಒಟ್ಟು ಸ್ಥಾನಗಳಲ್ಲಿ **1/3** ರಷ್ಟು ಸ್ಥಾನಗಳನ್ನು ಮೀಸಲಿಡಲಾಗಿದೆ. ಭಾರತದ ಜಿಲ್ಲಾ ಪಂಚಾಯಿತಿ ಸದಸ್ಯೆಯೊಬ್ಬರು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯನ್ನು ಉದ್ದೇಶಿಸಿ ತನ್ನ ಅನುಭವಗಳನ್ನು ಹಂಚಿಕೊಂಡದ್ದನ್ನು ಇಲ್ಲಿ ಸ್ಮರಿಸಬಹುದು.



| | ಲೋಕಸಭೆ | | | | ರಾಜ್ಯಸಭೆ | |
|---|---|---|---|---|---|---|
| ವರ್ಷ | ಸ್ಥಾನಗಳು | ಮಹಿಳಾ ಎಂಪಿಗಳು | % | ಸ್ಥಾನಗಳು | ರಾಜ್ಯಸಭಾ ಮಹಿಳಾ ಎಂಪಿಗಳು | % ಮಹಿಳಾ ಎಂಪಿಗಳು |
| 1952 | 499 | 22 | 4.4 | 219 | 16 | 07.31 |
| 1957 | 500 | 27 | 5.4 | 237 | 18 | 07.59 |
| 1962 | 5.3 | 34 | 6.8 | 238 | 18 | 07.56 |
| 1967 | 523 | 31 | 5.9 | 240 | 20 | 08.33 |
| 1971 | 521 | 22 | 4.2 | 243 | 17 | 07.00 |
| 1977 | 544 | 19 | 3.4 | 244 | 25 | 10.25 |
| 1980 | 544 | 28 | 7.9 | 244 | 24 | 09.84 |
| 1984 | 544 | 44 | 8.1 | 244 | 28 | 11.48 |
| 1989 | 517 | 27 | 5.3 | 245 | 24 | 09.80 |
| 1991 | 544 | 39 | 7.2 | 245 | 38 | 15.51 |
| 1996 | 543 | 39 | 7.2 | 223 | 20 | 08.52 |
| 1998 | 543 | 43 | 7.92 | 245 | 15 | 06.12 |
| 1999 | 543 | 49 | 9.02 | 245 | 19 | 07.76 |
| ಸರಾಸರಿ | 528 | 33 | 6.15 | 238 | 22 | 09.00 |

ಶಾಸಕಾಂಗದಲ್ಲಿ ಮಹಿಳೆಯರ ಪ್ರಾತಿನಿಧ್ಯ 1952 - 1999

### ಮಹಿಳಾ ಸಬಲೀಕರಣ ರಾಷ್ಟ್ರ ನೀತಿ (National policy for the empowerment of women):

ಸರ್ಕಾರದಿಂದ ಬಿಡುಗಡೆ ಮಾಡಿರುವ ಮಹಿಳಾ ಸಬಲೀಕರಣ ರಾಷ್ಟ್ರನೀತಿಯ ಪ್ರಮುಖ ಅಂಶಗಳನ್ನು ಇಲ್ಲಿ ನೀಡಲಾಗಿದೆ:

* ಮಹಿಳೆಯರು ತಮ್ಮ ಸಾಮರ್ಥ್ಯವನ್ನು ಪೂರ್ಣವಾಗಿ ಬಳಸಿಕೊಳ್ಳಲು ಅನುಗುಣವಾಗುವಂತೆ ಸಕಾರಾತ್ಮಕ ಆರ್ಥಿಕ ಮತ್ತು ಸಾಮಾಜಿಕ ನೀತಿಗಳನ್ನು ರೂಪಿಸಿ ಉತ್ತಮ ವಾತಾವರಣ ಕಲ್ಪಿಸುವುದು
* ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ವಲಯಗಳಲ್ಲಿ ಎಲ್ಲ ಹಕ್ಕುಗಳು ಮೂಲಭೂತ ಸ್ವಾತಂತ್ರ್ಯಗಳನ್ನು ಮಹಿಳೆಯರಿಗೆ ಪುರುಷರೊಡನೆ ಸರಿ ಸಮಾನವಾಗಿ ಹಂಚಿಕೊಳ್ಳಲು ಅವಕಾಶ.
* ಆರೋಗ್ಯ ಆರೈಕೆ, ಉತ್ತಮ ಶಿಕ್ಷಣ, ಉದ್ಯೋಗ, ಸಮಾನ ವೇತನ, ಸಾಮಾಜಿಕ ಸುರಕ್ಷೆ, ಸಾರ್ವಜನಿಕ ಹುದ್ದೆ ಇತ್ಯಾದಿಗಳಲ್ಲಿ ಮಹಿಳೆಯರಿಗೆ ಸಮಾನ ಅವಕಾಶ.